**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**

**ಹೊನ್ನಾವರ**

**ಸಿ ಸಿ ನಂಃ 324/2023**

ಫಿರ್ಯಾದಿಃ ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ.

**– ವಿರುದ್ಧ –**

ಆರೋಪಿತರುಃ

1. ಈಶ್ವರ ಮಂಜುನಾಥ ಹೆಗಡೆ
   ಪ್ರಾಯಃ 30 ವರ್ಷ, ಉಃ ಕೃಷಿ ಕೆಲಸ ,
   ಸಾಃ ಪಾವಲಮಕ್ಕಿ, ವಂದೂರು, ತಾಃ ಹೊನ್ನಾವರ.
2. ಸುಬ್ರಹಣ್ಯ ತಂದೆ ಮಂಜೂನಾಥ ಹೆಗಡೆ,
   ಪ್ರಾಯಃ 34 ವರ್ಷ, ಉಃ ಕೃಷಿಕೆಲಸ,
   ಸಾಃ ಪಾವಲಮಕ್ಕಿ, ವಂದೂರು,
   ತಾಃ ಹೊನ್ನಾವರ.
3. ವಿ.ಕೆ. ವಿಶಾಲ ತಂದೆ ಕೃಷ್ಣ ಭಟ್ಟ,
   ಪ್ರಾಯಃ 24 ವರ್ಷ, ಉಃ ಕೃಷಿ ಕೆಲಸ,
   ಸಾಃ ಪಾವಲಮಕ್ಕಿ, ಮಂದೂರು,
   ತಾಃ ಹೊನ್ನಾವರ. .
4. ಲಕ್ಷ್ಮೀನಾರಾಯಣ ತಂದೆ ವಿಶ್ವೇಶ್ವರ ಭಟ್ಟ,
   ಪ್ರಾಯಃ 47 ವರ್ಷ, ಉಃ ಕೃಷಿ ಕೆಲಸ,
   ಸಾಃ ಪಾವಲಮಕ್ಕಿ, ವಂದೂರು,
   ತಾಃ ಹೊನ್ನಾವರ.
5. ಸಾವಿತ್ರಿ ಕೋಂ ಗಣೇಶ ಹೆಗಡೆ,
   ಪ್ರಾಯಃ32 ವರ್ಷ, ಉಃ ಕಂಪನಿ ಮ್ಯಾನೇಜರ್,
   ಸಾಃ ಮತ್ತಿಕೇರಿ ಸಿರ್ಶಿ, ಹಾಲಿಃ 734, 2 ನೇ ಪ್ಲೋರ್, 2 ನೇ ಕ್ರಾಸ್, ಕಣ್ಣುರಮ್ಮ ಲೇ ಔಟ್.ಆರ್. ಎಮ್.ವಿ .ಎಕ್ಷ್ಟೆನ್ಷ ನ್. ಬೆಂಗಳೂರು
6. ಗಣೇಶ ತಂದೆ ಶಾಂತಾರಾಮ ಹೆಗಡೆ,
   ಪ್ರಾಯಃ33 ವರ್ಷ, ಉಃ ಮ್ಯಾನೇಜಿಂಗ ಡೈರಕ್ಟರ್,
   ವಾಸಃ ಮುತ್ತಿಕೇರಿ, ಸಿರ್ಶಿ, ಹಾಲಿಃ 734, 2 ನೇ ಪ್ಲೋರ್, 2 ನೇ ಕ್ರಾಸ್, ಕಣ್ಣುರಮ್ಮ ಲೇ ಔಟ್.ಆರ್. ಎಮ್.ವಿ .ಎಕ್ಷ್ಟೆನ್ಷ ನ್. ಬೆಂಗಳೂರು

**<u>ದೋಷಾರೋಪಣೆ</u>**

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ-

ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಪಾವಲಮಕ್ಕಿಯಲ್ಲಿರುವ, ಪಳ್ಳಿಕೇರಿಯ ಜಾಮೀಯಾ ಮಸಿದಿಯ ಹೊರಗೆ ದಿನಾಂಕ 19-01-2022 ರಂದು ಮಧ್ಯಾಹ್ನಃ 03.30 ಸಮಯದಲ್ಲೆ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಅಕ್ರಮ ಕೂಟ ರಚಿಸುವ ಮೂಲಕ ಭಾ.ದಂ.ಸಂ. ಕಲಂ **143, ಸಹವಾಚಕ ಕಲಂ 149** ನೇದರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಎರಡನೆಯದಾಗಿ ಆರೋಪಿತರಾದ ನೀವೆಲ್ಲರೂ ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮೇಲೆ ಅಕ್ರಮಕೂಟ ರಚಿಸಿ ದೊಂಬಿಯನ್ನು ಉಂಟುಮಾಡುವ ಮೂಲಕ **ಭಾ.ದಂ.ಸಂ ಕಲಂ 147 ಸಹವಾಚಕ ಕಲಂ 149** ರನ್ವಯ ಶಿಕ್ಷಾರ್ಹ ಆಪರಾಧ ಮಾಡಿರುತ್ತಿರಿ .

ಮೂರನೇಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ವಂದೂರು ಪಾವಲಕ್ಕಿಯಲ್ಲಿರುವ ಚಾಸಾ-4 ರವರ ಮನೆಯ ಅಂಗಳದ ತೋಟದಲ್ಲಿ ಅಕ್ರಮ ಪ್ರವೇಶ ಮಾಡುವ ಮೂಲಕ ನೀವು **ಭಾ.ದಂ.ಸಂ.ಕಲಂ.447 ಸಹವಾಚಕ ಕಲಂ ಸಹವಾಚಕ ಕಲಂ 149** ರನ್ವಯ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ನೇಯವರನ್ನು ಉದ್ದೇಶದಿಂದ ಬೋಸುಡಿ ರಂಡೆ ಮೊಬೈಲ್ ರೇಕಾರ್ಡ ಮಾಡುತ್ತೀಯಾ ಹಾಗೂ ನಿಮ್ಮ ಪೈಕಿ 1 ನೇ ಆರೋಪಿತನಾದ ನೀವು ಮೊಬೈಲ್ ರೇಕಾರ್ಡ ಮಾಡುತ್ತೀಯಾ ಇಲ್ಲಿ ನಿನಗೇನು ಕೆಲಸ ಅಂತಾ ಹೇಳಿ ಕೂದಲು ಹಿಡಿದೆಳೆದು ಜಗ್ಗಿ ಎಡಗೈ ಹಿಡಿದು ತಿರುಪಿದ್ದುಗೊಳಿಸಿ, ಅವರ ಮಾನಕ್ಕೆ ಕುಂದುಂಟು ಪಡಿಸುವ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 354 ಸಹ ಕಲಂ 149** ನೇದರಡಿಯಲ್ಲಿ ಶಿಕ್ಷರ್ಹಾ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಐದನೇಯದಾಗಿ, ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ನಿಮ್ಮ ಪೈಕಿ 2 ನೇ ಆರೋಪಿತನಾದ ನೀನು ಚಪ್ಪಲಿಯಿಂದ ಚಾಸಾ-1 ನೇಯವರನ್ನು ಹೊಡೆಯಲು ಮುಂದಾಗಿದ್ದು ಆಗ ಚಾಸಾ -1 ನೇಯವರು ಹೆದಕೆಯಿಂದ ಬೊಬ್ಬೆ ಹೊಡೆದಾಗ ನಿಮ್ಮ ಪೈಕಿ 1 ನೇ ಆರೋಪಿತನಾದ ನೀನು ಆ ರಂಡೆಯನ್ನು ಬಿಡಬೇಡಿ ಅಂತಾ ನೈಟಿಯನ್ನು ಹಿಂದಿನಿಂದ ಹಿಡಿದು ಎಳೆದು ಹರಿದು ಹಾಗೂ 3 ಮತ್ತು 4 ನೇ ಆರೋಪಿತರಾದ ನೀವು ಗಟ್ಟಿಯಾಗಿ ಹಿಡಿದುಕೊಂಡು . ಅವರ ಮಾನಕ್ಕೆ ಕುಂದುಂಟು ಪಡಿಸುವ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 354(ಬಿ) ಸಹ ಕಲಂ 149** ನೇದರಡಿಯಲ್ಲಿ ಶಿಕ್ಷರ್ಹಾ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ನಿಮ್ಮ ಪೈಕಿ 1,3 ಹಾಗೂ 4 ನೇ ಆರೋಪಿತರಾದ ನೀವು ಸ್ವ ಇಚ್ಛೆಯಿಂದ ಚಾಸಾ-1 ನೇಯವರಿಗೆ ಉಗುರಿನಿಂದ ಎಡಗೈ ಮೇಲೆ ಗೀರಿ ಸಾದಾ ಸ್ವರೂಪದ ರಕ್ತ ಗಾಯ ಪಡಿಸುವ ಮೂಲಕ, ಭಾ.ದಂ.ಸಂ.ಕಲಂ **323 ಸಹ ಕಲಂ 149** ನೇದರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಏಳನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ನಿಮ್ಮ ಪೈಕಿ 5 ನೇ ಆರೋಪಿತನಾದ ನೀನು ಚಾಸಾ-1 ರವನ್ನು ಉದ್ದೇಶಿಸಿ ಆ ಬೋಸುಡಿ ರಂಡೆಯನ್ನು ಈವತ್ತು ಮುಗಿಸೇ ಬಿಡಿ ಅಂತಾ ಅವ್ಯಾಚ್ಯ ಶಬ್ದದಿಂದ ನಿಂದಿಸಿದ್ದರಿಂದ ನಿಮ್ಮ ಮೇಲೆ ಭಾ.ದಂ.ಸಂ.ಕಲಂ **504 ಸಹವಾಚಕ** ನೇದರಡಿಯಲ್ಲಿ ಶಿಕ್ಷರ್ಹಾ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-4 ಹಾಗೂ 5 ನೇಯವರು ಸೇರಿ ಚಾಸಾ-1 ನೇಯವರನ್ನು ಆರೋಪಿತರಿಂದ ತಪ್ಪಿಸಿದಾಗ ನಿಮ್ಮ ಪೈಕಿ 6 ನೇ ಆರೋಪಿತನಾದ ನೀನು ಹೋಗುವಾಗ ಚಾಸಾ-1 ನೇಯವರನ್ನು ಉದ್ದೇಶಿಸಿ, ಇವತ್ತು ತಪ್ಪಿಸಿಕೊಂಡೆ ಇನ್ನೊಂದು ದಿನ ನಿನ್ನನ್ನು ಬಂದೂಕಿನಿಂದ ಸುಟ್ಟು ಹಾಕುತ್ತೇನೆ ಅಂತಾ ಜೀವ ಬೆದರಿಕೆ ಹಾಕಿ, ಭಾ.ದಂ.ಸಂ. ಕಲಂ **506 ಸಹ ಕಲಂ 149** ನೇದರಡಿ ಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ನೀವು ಮೇಲಿನ ಆರೋಪಗಳಡಿಯಲ್ಲಿ ವಿಚಾರಣೆಗೆ ಗುರಿಯಾಗ ತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆಃ 1. ನಿಮ್ಮ ಮೇಲೆ ಹೊರಿಸಲಾದ ಆರೋಪಣೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

5 ನೇ ಆರೋಪಿಯ ಉತ್ತರಃ

6 ನೇ ಆರೋಪಿಯ ಉತ್ತರಃ

ಪ್ರಶ್ನೆಃ 2. ನೀವು ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

5 ನೇ ಆರೋಪಿಯ ಉತ್ತರಃ

6 ನೇ ಆರೋಪಿಯ ಉತ್ತರಃ

ದಿನಾಂಕಃ– – 2023 **ಪ್ರಧಾನ ಪ್ರ.ದ.ನ್ಯಾದಂಡಾಧಿಕಾರಿ, ಹೊನ್ನಾವರ.**

ಆರೋಪಿತರುಃ

| | | |
|---|---|---|
| 1. | ಈಶ್ವರ ಮಂಜುನಾಥ ಹೆಗಡೆ | |
| 2. | ಸುಬ್ರಹಣ್ಯ ತಂದೆ ಮಂಜೂನಾಥ ಹೆಗಡೆ, | |
| 3. | ವಿ.ಕೆ. ವಿಶಾಲ ತಂದೆ ಕೃಷ್ಣ ಭಟ್ಟ, | |
| 4. | ಲಕ್ಷ್ಮೀನಾರಾಯಣ ತಂದೆ ವಿಶ್ವೇಶ್ವರ ಭಟ್ಟ, , | |
| 5. | ಸಾವಿತ್ರಿ ಕೋಂ ಗಣೇಶ ಹೆಗಡೆ, | |
| 6. | ಗಣೇಶ ತಂದೆ ಶಾಂತಾರಾಮ ಹೆಗಡೆ, | |